**ಸಾಕ್ಷಿಯನ್ನು ದಿಃ16.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ**

1. ನಾನು ರುಕ್ಮಣಮ್ಮ ನವರ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ.

2. ಈ ದಾವೆ ಹಾಕಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ.

3. ಈ ದಾವೆಗೆ ಸಂಬಂಧಪಟ್ಟ ದಾಖಲಾತಿಗಳ ಬಗ್ಗೆ ಮಾಹಿತಿ ಯಾರು ಕೊಟ್ಟರು ಎಂದರೆ, ವಕೀಲರು ಕೇಳಿದಂತೆ ದಾಖಲೆ ಪಡೆದು ನೀಡಿರುತ್ತೇವೆ.

4. ಜಮೀನಿನಲ್ಲಿ ರುವ ಮರಗಳನ್ನು ಪ್ರತಿವಾದಿಗಳು ಕಡಿದಿದ್ದು, ಪೊಲೀಸರಿಗೆ ನಾವು ದೂರು ನೀಡಿದಾಗ ಅವರು ನ್ಯಾಯಾಲಯಕ್ಕೆ ಹೋಗಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದರಿಂದ ದಾವೆ ಹಾಕಿರುತ್ತೇವೆ.

5. ಪ್ರತಿವಾದಿಗಳು ಎಷ್ಟು ಮರ ಕಡಿದರು ಎಂದರೆ ನನಗೆ ಗೊತ್ತಿಲ್ಲ. ನಾನು ಈಗ 2023 ರಿಂದ ಈಚೆಗೆ ಜಮೀನು ಕಡೆಗೆ ಹೋಗುತ್ತಿಲ್ಲ.

6. ಕುಳ್ಳೇಗೌಡ ನನಗೆ ತಾತ ಆಗಬೇಕು.

7. ಕುಳ್ಳೇಗೌಡನಿಗೆ ತೋಪೇಗೌಡ, ಜವರೇಗೌಡ ಹಾಗೂ ಸಣ್ಣೇಗೌಡ ಎಂಬ ಮೂರು ಜನ ಮಕ್ಕಳು.

8. ಕುಳ್ಳೇಗೌಡರ ಮಗ ತೋಪೇಗೌಡ ಮೂಲತಃ ಸ.ನಂ.94/11 ಪಿ1 ರಲ್ಲಿ 4 ಎಕರೆ ಜಮೀನು ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ಸದರಿ 4 ಎಕರೆಯಲ್ಲಿ 2 ಎಕರೆ ಸಣ್ಣೇಗೌಡರಿಗೆ ಹಾಗೂ 2 ಎಕರೆ ಜವರೇಗೌಡರಿಗೆ ನೀಡಿದರು ಎಂದರೆ ಸರಿ.

9. ಸಣ್ಣೇಗೌಡರಿಗೆ ಸಣ್ಣ ತೋಪೇಗೌಡ, ಬೋರೇಗೌಡ ಹಾಗೂ ಶಿವೇಗೌಡ ಎಂಬ ಮೂರು ಜನ ಮಕ್ಕಳು.

10. ಸಣ್ಣೇಗೌಡರ 2 ಎಕರೆಯನ್ನು ಬೋರೇಗೌಡರಿಗೆ ಹಾಗೂ ಶಿವೇಗೌಡರು ತಲಾ 1 ಎಕರೆ ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಸರಿ.

11. 1995-96 ರಲ್ಲಿ ಅವರು ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

12. ಸ.ನಂ.94/6 ರಲ್ಲಿ ಒಟ್ಟು 4 ಎಕರೆ ಇದೆ.

13. ಸ.ನಂ.94/6 ಜಮೀನಿಗೆ ಹಾಗೂ ಸ.ನಂ.94/11 ಪಿ1 ರ ಜಮೀನಿಗೆ ಎಷ್ಟು ದೂರ ಇದೆ ಎಂದರೆ ಜವರೇಗೌಡರ ಪಕ್ಕ ಇದೆ.

14. ದಾವಾ ಜಮೀನಿನ ದಕ್ಷಿಣಕ್ಕೆ ಹಾರಂಗಿ ಕಾಲುವೆ, ಪಶ್ಚಿಮಕ್ಕೆಃ ಚಿಕ್ಕೇಗೌಡರ ಜಮೀನು, ಪೂರ್ವಕ್ಕೆಃ ಜಿ.ಕೆ.ಜವರೇಗೌಡರ ಜಮೀನು. ಸದರಿ ಚಕ್ಕುಬಂದಿಯಲ್ಲಿ ವಾದಿ ಸ್ವಾಧೀನದಲ್ಲಿ ಇರುವುದನ್ನು ನೋಡಿದವರು ಇದ್ದಾರೆ. ಅವರನ್ನು ಕರೆಸಿ ಸಾಕ್ಷಿ ಹೇಳಿಸಲು ತೊಂದರೆ ಇಲ್ಲ.

15. ಒಟ್ಟು 4 ಎಕರ ದಕ್ಷಿಣಕ್ಕೆ ಹಾರಂಗಿ ಕಾಲುವ, ಪೂರ್ವಕ್ಕೆ ಜವರೇಗೌಡ, ಪಶ್ಚಿಮಕ್ಕೆ ಚಿಕ್ಕೇಗೌಡ ಹಾಗೂ ಉತ್ತರಕ್ಕೆಃ ಸಣ್ಣೇಗೌಡರ ಮಕ್ಕಳು ಶಿವೇಗೌಡ ಹಾಗೂ ಬೋರೇಗೌಡ.

16. ಸ.ನಂ.94/11 ಪಿ1 ರ ಪೂರ್ವಕ್ಕೆಃ ಸ.ನಂ.94/12 ಪಿ1 ರ ಜಮೀನು ಇದೆ ಎಂದರೆ ಸರಿಯಲ್ಲ. ಸ.ನಂ.94/12 ಪಿ1 ರಲ್ಲಿ ರೇವಣ್ಣ ರವರಿಗೆ ತೋಪೇಗೌಡರು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಸಣ್ಣೇಗೌಡರ ಮಗ ಶಿವೇಗೌಡರ 1 ಎಕರೆ ಎಂದರೆ ಅವರ ಜಮೀನು ಉತ್ತರಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ.

17. ಬೋರೇಗೌಡರ 1 ಎಕರೆ ಜಮೀನಿನ ಪೂರ್ವಕ್ಕೆ ಶಿವೇಗೌಡರ ಜಮೀನು, ಪಶ್ಚಿಮಕ್ಕೆ ಸಣ್ಣೇಗೌಡರ ಜಮೀನು, ಉತ್ತರಕ್ಕೆಃ ತಮ್ಮೇಗೌಡರ ಜಮೀನು, ಉತ್ತರಕ್ಕೆ ಹಾರಂಗಿ ನಾಲೆ ಎಂದರೆ, ಹಾರಂಗಿ ನಾಲೆ ಬರುವುದಿಲ್ಲ ಎಂದು ನುಡಿಯುತ್ತಾರೆ.

18. ಶಿವೇಗೌಡರ 1 ಎಕರೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ.

19. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತು.

20. ಸ.ನಂ.94/11 ಪಿ1 ರ 4 ಎಕರೆ ಪೈಕಿ 2 ಎಕರೆಗೆ ನೀಡಿರುವ ಚಕ್ಕುಬಂದಿ ತೋರಿಸಲು ಯಾವುದೇ ದಾಖಲೆ ವಾದಿ ನೀಡಿಲ್ಲ ಎಂದರೆ ಸರಿಯಲ್ಲ.

21. ನೀವು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿಲ್ಲ ಹಾಗೂ ಯಾರ್ಯಾರು ಸ್ವಾಧೀನದಲ್ಲಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

22. 1, 2, 6 ಮತ್ತು 7 ನೇ ಪ್ರತಿವಾದಿಗಳು ಅವರ ಭಾಗಕ್ಕೆ ಬಂದ ಜಾಗದಲ್ಲಿ ಅವರು ಸ್ವಾಧೀನದಲ್ಲಿದ್ದಾರೆ ಎಂದರೆ ಈಗ ಗೊತ್ತಿಲ್ಲ, ಮೊದಲು ಇದ್ದರು.

23. ಅವರು ಯಾವುದೇ ಕಾಲದಲ್ಲೂ ದಾವಾ ಜಮೀನಿಗೆ ಅವರು ತೊಂದರೆ ನೀಡಿಲ್ಲ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ